# ಗುರುವಾಕ್ಯದಲ್ಲಿ ಶ್ರದ್ಧೆ



**ಗುರು** ಅನೇಕರಿಗೆ ಬೇಕಾಗುತ್ತಾನೆ. ಆದರೆ ಆತನ ವಾಕ್ಯದಲ್ಲಿ ಶ್ರದ್ಧೆಯಿಡಬೇಕು. ಗುರುವನ್ನು ಸಾಕ್ಷಾತ್ ಭಗವಂತನೇ ಎಂಬ ದೃಷ್ಟಿಯಿಂದ ನೋಡಿದಾಗ ಮಾತ್ರವೇ ಆಧ್ಯಾತ್ಮಿಕ ಉನ್ನತಿ ಉಂಟಾಗುತ್ತದೆ. ಅದಕ್ಕಾಗಿಯೆ ವೈಷ್ಣವರು ಹೇಳುವುದು: "ಗುರು, ಕೃಷ್ಣ, ವೈಷ್ಣವ ಒಂದೇ" ಎಂದು.

ಮುಂದೆ ಹೋಗು, ಸೌದೆ ಕತ್ತರಿಸುವವನು ಸಾಧುವಿನ ಆದೇಶದಂತೆ ಮುಂದುವರಿದು ಚಂದನವನ, ಬೆಳ್ಳಿಯಗಣಿ ಇವನ್ನು ಕಂಡ. ಇನ್ನೂ ಮುಂದಕ್ಕೆ ಹೋಗಿ ಹೀರ ಮಾಣಿಕ್ಯಗಳ ಗಣಿಗಳನ್ನು ಕಂಡ.

ಒಟ್ಟು ಎಂಟು ಪಾಶಗಳಿವೆ—ಲಜ್ಜೆ, ದ್ವೇಷ, ಭಯ, ಜಾತಿ, ಕುಲ, ಶೀಲ, ಶೋಕ, ಜುಗುಪ್ಸೆ. ಗುರುವಿಲ್ಲದೆ ಇವನ್ನು ನಿರ್ಮೂಲ ಮಾಡಲಾಗುವುದಿಲ್ಲ.

ನಿಜವಾದ ಶ್ರದ್ಧೆಯಿಂದಲೇ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡುಬಿಡಬಹುದು. ಭಗವಂತನ ಸಂಬಂಧವಾಗಿ ಗುರು ಹೇಳಿರುವುದರಲ್ಲೆಲ್ಲಾ ಪೂರ್ಣ ಶ್ರದ್ಧೆಯಿಡುವುದಾದರೆ, ಸಾಕ್ಷಾತ್ಕಾರ ಇನ್ನೂ ಬೇಗ ದೊರೆತುಬಿಡುತ್ತದೆ. ಹಸು ಆರಿಸಿಕೊಂಡು ಮೇವು ಮೇಯ್ದರೆ ಕಡಮೆ ಹಾಲು ಕೊಡುತ್ತದೆ. ಆದರೆ ಅದು ಎಲ್ಲಾ ವಿಧದ ಗಿಡಗಡ್ಡೆಗಳನ್ನು ತಿಂದಿತು ಎಂದರೆ, ಧಾರಾಕಾರವಾಗಿ ಹಾಲು ಕರೆಯುತ್ತದೆ.

ಒಬ್ಬ ಗುರು ತನ್ನ ಶಿಷ್ಯನಿಗೆ ಹೇಳಿದ: "ಪ್ರತಿಯೊಂದು ಶರೀರದಲ್ಲೂ ರಾಮನೇ ಇದ್ದಾನೆ" ಎಂಬುದಾಗಿ. ಶಿಷ್ಯನಿಗೆ ಅದರಲ್ಲಿ ಪೂರ್ಣ ಶ್ರದ್ಧೆಯುಂಟಾಯಿತು. ಒಂದು ದಿನ ನಾಯಿಯೊಂದು ಆತನ ಕೈಯಿಂದ ರೊಟ್ಟಿಯನ್ನು ಕಿತ್ತುಕೊಂಡು ಓಡಲಾರಂಭಿಸಿತು. ಆಗ ಶಿಷ್ಯ ತುಪ್ಪದ ಬಟ್ಟಲನ್ನು ಕೈಯಲ್ಲಿ ಹಿಡಿದು ಅದರ ಹಿಂದೆ ಓಡುತ್ತಾ ಕೂಗಲಾರಂಭಿಸಿದ. "ಎಲೋ ರಾಮಾ, ಒಂದು ನಿಮಿಷ ನಿಲ್ಲೋ. ರೊಟ್ಟಿಗೆ ಇನ್ನೂ ತುಪ್ಪ ಸವರಿಲ್ಲ ಕಣೋ!" ಎಂದು. ಶ್ರದ್ಧೆಯಿಂದ ಎಲ್ಲವೂ ದೊರೆಯುತ್ತದೆ.

ಒಮ್ಮೆ ಒಬ್ಬನಿಗೆ ಗುರುವಿನಿಂದ ಆದೇಶ ದೊರಯಿತಂತೆ, ಆತ ಟಗರಿನಲ್ಲಿ ತನ್ನ ಇಷ್ಟದೇವರನ್ನು ನೋಡಬೇಕು ಎಂಬುದಾಗಿ. ಆತ ಅದನ್ನು ಒಡನೇ ನಂಬಿದನಂತೆ. ಸರ್ವಭೂತಗಳಲ್ಲೂ ಭಗವಂತನೇ ಇದ್ದಾನೆ, ಎಂದು.

ಗುರುವಿನಿಂದ ಉಪದೇಶ ಪಡೆಯಬೇಕು. ಒಬ್ಬ ಒಮ್ಮೆ ಬಾಣಲಿಂಗ ಶಿವನಿಗಾಗಿ ಹುಡುಕುತ್ತಿದ್ದ. ಯಾರೋ ಒಬ್ಬ ಹೇಳಿದ: "ಆ ನಿರ್ದಿಷ್ಟ ನದಿಯ ಹತ್ತಿರ ಹೋಗು. ಅಲ್ಲಿ ಒಂದು ಮರ ಕಣ್ಣಿಗೆ ಬೀಳುತ್ತದೆ. ಆ ಮರದ ಹತ್ತಿರ ಒಂದು ಜಲಾವರ್ತವನ್ನು ನೋಡುತ್ತೀಯೆ. ಅದರಲ್ಲಿ ಮುಳುಗು ಹಾಕಿ ನೋಡು. ಆಗ ನಿನಗೆ ಬಾಣಲಿಂಗ ಶಿವ ದೊರಕುತ್ತಾನೆ." ಆದ್ದರಿಂದ ಪರಮಹಂಸರು ಹೇಳುವುದು, ಗುರುವಿನಿಂದ ಉಪದೇಶ ಪಡೆಯಬೇಕು ಎಂಬುದಾಗಿ.

ಸಚ್ಚಿದಾನಂದನೇ ಗುರುರೂಪ ಧರಿಸಿ ಬರುತ್ತಾನೆ. ಮನುಷ್ಯ ಗುರುವಿನಿಂದ ದೀಕ್ಷೆಯನ್ನು ಪಡೆದ ವ್ಯಕ್ತಿ ಆತನನ್ನು ಕೇವಲ ಮನುಷ್ಯ ಅಂತ ಭಾವಿಸಿದ್ದೇ ಆದರೆ, ಆ ದೀಕ್ಷಿತನಿಗೆ ಯಾವ ಉನ್ನತಿಯೂ ಉಂಟಾಗದು. ಆತನನ್ನು ಸಾಕ್ಷಾತ್ ಭಗವಂತನೇ ಎಂಬುದಾಗಿ ಭಾವಿಸಿದರೆ ತಾನೆ ದೀಕ್ಷಿತನಿಗೆ ಮಂತ್ರದಲ್ಲಿ ಶ್ರದ್ಧೆಯುಂಟಾಗುವುದು. ಶ್ರದ್ಧೆಯೊಂದು ಉಂಟಾಯಿತು ಎಂದರೆ ಎಲ್ಲಾ ದೊರೆತ ಹಾಗೆಯೇ. ಶೂದ್ರಜಾತಿಯ ಏಕಲವ್ಯ ದ್ರೋಣನ ಮಣ್ಣಿನ ಪ್ರತಿಮೆಯನ್ನೇ ಸಾಕ್ಷಾತ್ ದ್ರೋಣನೆಂದು ಭಾವಿಸಿ ಆತ ಅದನ್ನು ಪೂಜಿಸುತ್ತಿದ್ದ. ಅದಕ್ಕಾಗಿಯೇ ಆತ ಧನುರ್ವಿದ್ಯೆಯಲ್ಲಿ ಸಿದ್ಧಪುರುಷನಾದ.

ಬ್ರಹ್ಮಜ್ಞಾನ ಸಹಜವಾಗಿ ದೊರೆತು ಬಿಡುತ್ತದೆಯೇ? ಮನೋನಾಶವಾಗದ ಹೊರತು ದೊರೆಯದು. ಒಬ್ಬ ಗುರು ತನ್ನ ಶಿಷ್ಯನಿಗೆ ಹೇಳಿದ, "ನೀನು ನಿನ್ನ ಮನಸ್ಸನ್ನು ನನಗೆ ಅರ್ಪಿಸಿಬಿಡು, ನಾನು ನಿನಗೆ ಬ್ರಹ್ಮಜ್ಞಾನವನ್ನು ಕೊಟ್ಟುಬಿಡುತ್ತೇನೆ" ಎಂದು.

ಗುರುವಾಕ್ಯದಲ್ಲಿ ವಿಶ್ವಾಸವಿಡಬೇಕು. ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು, ಆತನ ಮಾತಿನಲ್ಲಿ ವಿಶ್ವಾಸವಿಟ್ಟರೆ—ಬಾಲಕನ ಹಾಗೆ ವಿಶ್ವಾಸವಿಟ್ಟರೆ—ಭಗವಂತ ದೊರೆತುಬಿಡುತ್ತಾನೆ. ಬಾಲಕನದು ಎಂಥ ವಿಶ್ವಾಸ! ಒಬ್ಬನನ್ನು ತೋರಿಸಿ ತಾಯಿ ಮಗುವಿಗೆ ಹೇಳಿದರೆ, "ಆತ ನಿನ್ನ ಅಣ್ಣನಾಗಬೇಕು" ಅಂತ, ಒಡನೆಯೇ ಅದು ನಂಬುತ್ತದೆ ಆತ ತನ್ನ ಅಣ್ಣ ಅಂತ. ಆತ ಬ್ರಾಹ್ಮಣನಾಗಿದ್ದರೂ ಸರಿಯೆ ಅಥವಾ ಕಮ್ಮಾರನಾಗಿದ್ದರೂ ಸರಿಯೆ, ತಾಯ ಮಾತಿನಲ್ಲಿ ಅದಕ್ಕೆ ನೂರಕ್ಕೆ ನೂರಿಪ್ಪತ್ತೈದು ಭಾಗ ವಿಶ್ವಾಸ. ತಾಯಿ ಹೇಳಿದರೆ, "ಆ ಕೊಠಡಿಯಲ್ಲಿ ಗೊಗ್ಗಯ್ಯನಿದ್ದಾನೆ" ಅಂತ, ಅಲ್ಲಿ ಗೊಗ್ಗಯ್ಯನಿದ್ದಾನೆ ಅಂತ ಮಗು ಸಂಪೂರ್ಣವಾಗಿ ನಂಬಿಬಿಡುತ್ತದೆ. ಬಾಲಕನ ವಿಶ್ವಾಸ ಎಂಬುವುದು ಇದೇ. ಗುರುವಾಕ್ಯದಲ್ಲಿ ಇಂಥ ವಿಶ್ವಾಸಬೇಕು. ಕಪಟಿಯ, ಲೆಕ್ಕಾಚಾರದ ಬುದ್ಧಿಯಿಂದ ಭಗವಂತನನ್ನು ಪಡೆಯಲಾಗೋದಿಲ್ಲ. ಶ್ರದ್ಧಾವಂತನಾಗಿಯೂ ಸರಳನಾಗಿಯೂ ಆಗಬೇಕು; ಕಪಟಿಯಾದರೆ ಆಗದು. ಸರಳನಿಗೆ ಭಗವಂತ ಬಹಳ ಸಹಜವಾಗಿ ದೊರೆತುಬಿಡುತ್ತಾನೆ.

ಐಂದ್ರಜಾಲಕನ ಆಟವನ್ನು ನೀನು ನೋಡಿಲ್ಲವೆ? ಅನೇಕ ಗಂಟು ಹಾಕಿರುವ ಒಂದು ಹಗ್ಗದ ತುದಿಯನ್ನು ಒಂದು ಆಸರೆಗೆ ಕಟ್ಟಿ, ಅದರ ಇನ್ನೊಂದು ತುದಿಯನ್ನು ತನ್ನ ಕೈಯಲ್ಲಿ ಹಿಡಿದುಕೊಳ್ಳುತ್ತಾನೆ. ಬಳಿಕ ಒಂದೆರಡು ಸಲ ಹಗ್ಗವನ್ನು ಅಲುಗಾಡಿಸುತ್ತಾನೆ. ಒಡನೇ ಗಂಟುಗಳೆಲ್ಲಾ ಬಿಚ್ಚಿಕೊಂಡು ಬಿಡುತ್ತವೆ. ಆದರೆ ಬೇರೆ ಯಾರೇ ಆಗಲಿ, ಎಷ್ಟೇ ಪ್ರಯತ್ನ ಪಟ್ಟರೂ ಅದನ್ನು ಬಿಚ್ಚಲಾಗುವುದಿಲ್ಲ. ಗುರುವಿನ ವಾಕ್ಯದಲ್ಲಿ ಶ್ರದ್ಧೆ ಇದ್ದರೆ, ಅಜ್ಞಾನದ ಎಲ್ಲಾ ಗಂಟುಗಳು ಒಂದೇ ಮುಹೂರ್ತದಲ್ಲೇ ಬಿಚ್ಚಿಹೋಗಿಬಿಡುತ್ತವೆ.

*ಶ್ರೀರಾಮಕೃಷ್ಣ ವಚನವೇದ ದಿಂದ*